ಜಿ.ವಿ. ಆನಂದಮೂರ್ತಿ

# ಸಾಮರಸ್ಯದ ನದಿ



ಹೊಸಪಾಳ್ಯವನ್ನು ತಿಗಳರ ಕೇರಿ ಎಂದು ಕರೆಯುವುದು ವಾಡಿಕೆ. ತೋಟಗಾರಿಕೆಯನ್ನು ಕಲೆಯಂತೆ ಮೈಗೂಡಿಸಿಕೊಂಡಿದ್ದ ತಿಗಳರು ಅಲ್ಲಿನ ಬಹುಸಂಖ್ಯಾತರು. ಅದೇ ಕೇರಿಯಲ್ಲಿ ಕ್ಷೌರಿಕರ ಮುಕುಂದಪ್ಪನವರದು ಮತ್ತು ಕುಲುಮೆ ಕಾಳಪ್ಪನವರ ಒಂದು ಮನೆ ಮಾತ್ರ ಇತ್ತು. ನಾನು ಕಂಡಂತೆ ತರತಮ ಭಾವವನ್ನು ಮರೆಸುವ ಉಲ್ಲಾಸಕರ ಕೇರಿ ಅದು. ತಿಗಳ ಸಮುದಾಯದ ಕೆಂಪಮ್ಮಜ್ಜಿ, ಹನುಮೇಗೌಡರು, ಬೆಳ್ಳಾವೆಪ್ಪ ಮತ್ತು ಕ್ಷೌರಿಕರ ಮುಕುಂದಪ್ಪ ಆ ಕೇರಿಯ ಗೌರವಾನ್ವಿತ ವ್ಯಕ್ತಿಗಳಾಗಿದ್ದರು. ಮನುಷ್ಯರನ್ನು ಮನುಷ್ಯರಿಂದ ಪ್ರತ್ಯೇಕಿಸುವ ಯಾವ ಗೋಡೆಗಳೂ ಹೊಸಪಾಳ್ಯದ ಕೇರಿಯಲ್ಲಿರಲಿಲ್ಲ! ಇಂತಹ ಪರಿವರ್ತನೆಯ ಹರಿಕಾರರಾಗಿ ಕೆಂಪಮ್ಮಜ್ಜಿ, ಬೆಳ್ಳಾವೆಪ್ಪ, ಹನುಮೇಗೌಡರು ಮತ್ತು ಮುಕುಂದಪ್ಪನವರು ಕಾಣುತ್ತಿದ್ದರು. ಇವರ ನಡೆ ನುಡಿ ಯಾವ ಸಮಾಜ ಸುಧಾರಕರಿಗಿಂತ ಎಳ್ಳಿನ ಮೊನೆಯಷ್ಟೂ ಕಡಿಮೆಯಿರಲಿಲ್ಲ!

'ಹಲವು ತೋಟದ ಹೂಗಳು' ಎನ್ನುವ ತತ್ವದ ರೂಪಕದಂತಿದ್ದ ಹೊಸಪಾಳ್ಯ, ಸಮುದಾಯಗಳ ನಡುವಿನ ಕೊಡುಕೊಳುವಿಕೆಗೆ ಹೇಳಿಮಾಡಿಸಿದ ಕೇರಿಯಾಗಿತ್ತು. ಬೇರೆಯವರ ಕಷ್ಟಕ್ಕೆ ಮಿಡಿಯುತ್ತಿದ್ದ ಕೆಂಪಮ್ಮಜ್ಜಿ ಇನ್ನೊಬ್ಬರ ಕಣ್ಣೀರನ್ನು ತನ್ನ ಸೆರಗಿನಿಂದಲೇ ಒರೆಸುತ್ತಿತ್ತು. ತಮ್ಮ ತೋಟದಲ್ಲಿ ಏನನ್ನೇ ಬೆಳೆದರೂ ಆಕೆ ಹೇಳುತ್ತಿದ್ದುದು, 'ಮೊದಲು ಹೋಗಿ ಮುಕುಂದಪ್ಪನವರ ಮನೆಗೆ ಕೊಟ್ಟು ಬನ್ನಿ...' ಎಂದು. ಗಾಳಿ ಬೆಳಕಿನಂತೆ ಎಲ್ಲರ ಮನೆಗೂ ತಾರಾಡುತಿದ್ದ ಕೆಂಪಮ್ಮಜ್ಜಿ ಕೇರಿಯ ಕರುಣೆಯ ದೇವತೆಯಂತೆ ಇತ್ತು. ಕರಾವು ನಡೆಯುವ ಮನೆಯವರು ಹಾಲು, ಮಜ್ಜಿಗೆ, ಮೊಸರನ್ನು ದೇವರಿಗೆ ಮೀಸಲು ಕೊಡುವಂತೆ ಮುಕುಂದಪ್ಪನವರ ಮನೆಗೆ ತಪ್ಪದೆ ಕೊಟ್ಟುಬರುತ್ತಿದ್ದರು. ಹೀಗೆ ಸಾಮರಸ್ಯದ ನದಿಯೊಂದು ಹೊಸಪಾಳ್ಯದಲ್ಲಿ ಹರಿಯುತ್ತಿತ್ತು. ಗ್ರಾಮೀಣ ಬದುಕಿನ ಸಂಕಷ್ಟಗಳನ್ನು ಮರೆಸುವಂಥ ಇಂತಹ ಸಣ್ಣ ಸಣ್ಣ ವಿವರಗಳು, ಅಲ್ಲಿನ ಸಾಮುದಾಯಿಕ ಬದುಕನ್ನು ಸಹ್ಯಗೊಳಿಸಿದ್ದವು.

ಇನ್ನು ಮುಕುಂದಪ್ಪನವರ ಮನೆಯಲ್ಲಿ ಮದುವೆ ಕಾರ್ಯ ಜರುಗಿದರಂತೂ ಚಪ್ಪರ ಹಾಕುವುದರಿಂದ ಮೊದಲುಗೊಂಡು, ಸೌದೆ ಸೀಳೋದು, ಮದುವೆಗೆ ಬೇಕಾದ ವೀಳ್ಯದೆಲೆ, ಅಡಕೆ, ಬಾಳೆಹಣ್ಣು, ಮಾವಿನೆಲೆ, ಹೂವು, ತೆಂಗಿನ ಕಾಯಿ ಸಮಸ್ತವನ್ನೂ ನೆರೆಹೊರೆಯ ತಿಗಳ ಸಮುದಾಯದವರು ಮುಕುಂದಪ್ಪನವರ ಮನೆಗೆ ತಲುಪಿಸುತ್ತಿದ್ದರು. ಇಡೀ ಕೇರಿ ಮದುವೆಯನ್ನು ತಮ್ಮ ಮನೆಯ ಮದುವೆಯೆಂದೇ ಭಾವಿಸಿ ಸಂಭ್ರಮಿಸುತ್ತಿತ್ತು! ಮದುವೆ ಕಾರ್ಯದಲ್ಲಿ